## ಸೂರ್ಯಕಾಂತಿ ಸಂಕರಣ ತಳಿ ಕೆ.ಬಿ.ಎಸ್.ಹೆಚ್–90:

ಕೆ.ಬಿ.ಎಸ್.ಹೆಚ್–90 ಸಂಕರಣ ತಳಿಯ ಅಲ್ಪಾವದಿಯಾಗಿದ್ದು (80-82 ದಿನಗಳು) ಅಧಿಕ ಇಳುವರಿ ಮತ್ತು ಉತ್ತಮ ಎಣ್ಣೆಯ ಅಂಶ (39-40%) ಹೊಂದಿರುತ್ತದೆ. ಈ ಸಂಕರಣ ತಳಿಯು ನೀರಾವರಿಯಲ್ಲಿ 21 – 24 ಕ್ವಿ/ಹೆ ಹಾಗೂ ಮಳೆಯಾಶ್ರಿತದಲ್ಲಿ 10– 12 ಕ್ವಿ/ಹೆ ಬೀಜದ ಇಳುವರಿಯನ್ನು ನೀಡುತ್ತದೆ. ಈ ಸಂಕರಣ ತಳಿಯು ಮಧ್ಯಮ ಎತ್ತರಾಗಿದ್ದು, ಕೇದಿಗೆ ರೋಗ ನಿರೋಧಕ ಶಕ್ತಿ ಹೊಂದಿರುತ್ತದೆ. ಈ ಸಂಕರಣ ತಳಿಯನ್ನು ಕರ್ನಾಟಕದ ವಲಯ 4, 5, 6 ಮತ್ತು 7 ರಲ್ಲಿ ಮಳೆಯಾಶ್ರಿತ ಹಾಗೂ ನೀರಾವರಿ ಪ್ರದೇಶಗಳಲ್ಲಿ ಬೆಳೆಯಬಹುದಾಗಿದೆ.




## ಆಶಾದಾಯಕ ಸಂಕರಣ ತಳಿ: ಕೆ.ಬಿ.ಎಸ್.ಹೆಚ್.– 91

ಈ ಆಶಾದಾಯಕ ಸಂಕರಣ ತಳಿಯ ಅವಧಿ 85-90 ದಿನಗಳಾಗಿದ್ದು, ಅಧಿಕ ಇಳುವರಿ ಮತ್ತು ಉತ್ತಮ ಎಣ್ಣೆಯ ಅಂಶ (39-40%) ಹೊಂದಿರುತ್ತದೆ. ಈ ಸಂಕರಣ ತಳಿಯು ನೀರಾವರಿಯಲ್ಲಿ 23 – 25 ಕ್ವಿ/ಹೆ ಹಾಗೂ ಮಳೆಯಾಶ್ರಿತದಲ್ಲಿ 9– 11 ಕ್ವಿ/ಹೆ ಬೀಜದ ಇಳುವರಿಯನ್ನು ನೀಡುತ್ತದೆ. ಈ ಸಂಕರಣ ತಳಿಯು ಕೇದಿಗೆ ರೋಗ ನಿರೋಧಕ ಶಕ್ತಿ ಮತ್ತು




ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಿಂದ ಬಿಡುಗಡೆಗೊಂಡಿರುವ ಸಂಕರಣ ತಳಿಗಳ ಮೂಲ ಹಾಗೂ ಪ್ರಮಾಣಿತ ಬೀಜೋತ್ಪಾದನಾ ತಾಂತ್ರಿಕತೆಗಳನ್ನು ವಿವರಿಸಲಾಗಿದೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಿಂದ ಬಿಡುಗಡೆಗೊಂಡಿರುವ ಸಂಕರಣ ತಳಿಗಳು ಮತ್ತು ಅವುಗಳ ಪಾಲಕರು

| ಕ್ರ. ಸಂ. | ಸಂಕರಣ ತಳಿ | ಪಾಲಕರು | |
|---|---|---|---|
| | | ಹೆಣ್ಣು | ಗಂಡು |
| 1. | ಕೆ.ಬಿ.ಎಸ್.ಹೆಚ್–53 | ಸಿ.ಎಮ್.ಎಸ್–335 ಎ | ಆರ್.ಹೆಚ್.ಎ–95 ಸಿ1 |
| 2. | ಕೆ.ಬಿ.ಎಸ್.ಹೆಚ್–78 | ಸಿ.ಎಮ್.ಎಸ್–1103 ಎ | ಆರ್.ಹೆಚ್.ಎ–92 |
| 3. | ಕೆ.ಬಿ.ಎಸ್.ಹೆಚ್–85 | ಸಿ.ಎಮ್.ಎಸ್–903 ಎ | ಜಿಕೆವಿಕೆ–756 |
| 4. | ಕೆ.ಬಿ.ಎಸ್.ಹೆಚ್–88 | ಸಿ.ಎಮ್.ಎಸ್–1103 ಎ | ಜಿಕೆವಿಕೆ–763 |
| 5. | ಕೆ.ಬಿ.ಎಸ್.ಹೆಚ್–90 | ಸಿ.ಎಮ್.ಎಸ್–207 ಎ | ಜಿಕೆವಿಕೆ–763 |

## ಬೀಜೋತ್ಪಾದನಾ ತಾಕುಗಳ ನಡುವಿನ ಕನಿಷ್ಠ ಪ್ರತ್ಯೇಕತಾ ಅಂತರ:

ಸೂರ್ಯಕಾಂತಿ ಪರಕೀಯ ಪರಾಗಸ್ಪರ್ಶ ಸಸ್ಯವಾದ್ದರಿಂದ ಮೂಲ ಹಾಗೂ ಪ್ರಮಾಣಿತ ಬೀಜೋತ್ಪಾದನೆಯಲ್ಲಿ ಉಪಯೋಗಿಸುವ ಗಂಡು ಮತ್ತು ಹೆಣ್ಣು ತಳಿಗಳ ಪರಿಶುದ್ಧತೆಯನ್ನು ಸಂಪೂರ್ಣವಾಗಿ ಕಾಪಾಡಿಕೊಳ್ಳುವುದು ಅತ್ಯವಶ್ಯಕ. ಇದನ್ನು ಎರಡು ವಿಧದಲ್ಲಿ ಕಾಪಾಡಿಕೊಳ್ಳಬಹುದು:

ಅ. ದೂರದ ಅಂತರ (Distance / space isolation) ಪಾಲಿಸುವ ಮೂಲಕ

ಆ. ಕಾಲದ ಅಂತರ (Time isolation) ಪಾಲಿಸುವ ಮೂಲಕ

**ಅ. ದೂರದ ಅಂತರ (Distance / space isolation):** ಸಾಮಾನ್ಯವಾಗಿ ಸೂರ್ಯಕಾಂತಿ ಬೀಜೋತ್ಪಾದನಾ ತಾಕುಗಳಲ್ಲಿ ಹೂ ಅರಳಿದ ಸಮಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜೇನು ನೊಣಗಳು ಪರಾಗ ಹಾಗೂ ಮಕರಂದ ಸಂಗ್ರಹಣೆಗಾಗಿ ಗಂಡು ಮತ್ತು ಹೆಣ್ಣು ಹೂಗಳ ಮೇಲೆ ಕೂರುವುದರಿಂದ ಕೆಲವೊಮ್ಮೆ ಬೀಜೋತ್ಪಾದನಾ ತಾಕಿನ ಸುತ್ತ ಮುತ್ತ ಇರಬಹುದಾದ ಸೂರ್ಯಕಾಂತಿಯ ಅನ್ಯ ತಳಿಗಳ ಪರಾಗವನ್ನು ತಂದು ತಳಿ ಶುದ್ಧತೆ ಹಾಳಾಗುವ ಸಂಭವವಿರುತ್ತದೆ. ಆದುದರಿಂದ ಸಂಕರಣ ತಳಿಗಳ ಬೀಜೋತ್ಪಾದನಾ ತಾಕಿನ ಸುತ್ತ ಮುತ್ತ ಕನಿಷ್ಠ 600–1000 ಮೀ. ಅಂತರದಲ್ಲಿ ಯಾವುದೇ ಅನ್ಯ ತಳಿಗಳ ಸೂರ್ಯಕಾಂತಿ ಬೆಳೆ ಇರದಂತೆ ಎಚ್ಚರಿಕೆ ವಹಿಸುವುದು ಅತ್ಯವಶ್ಯಕ. ಇದರಿಂದ ತಳಿ ಶುದ್ಧತೆಯನ್ನು ಕಾಪಾಡುವುದರ ಜೊತೆಗೆ ಉತ್ತಮ ಗುಣಮಟ್ಟದ ಬೀಜವನ್ನು ಸಹ ಪಡೆಯಬಹುದು.

**ಆ. ಕಾಲದ ಅಂತರ (Time isolation):** ಕೆಲವೊಮ್ಮೆ ಅನಿವಾರ್ಯ ಕಾರಣಗಳಿಂದಾಗಿ ಸೂರ್ಯಕಾಂತಿ ಬೀಜೋತ್ಪಾದನಾ ತಾಕು ಹಾಗೂ ಇತರೆ ಅನ್ಯ ತಳಿಗಳ ಸೂರ್ಯಕಾಂತಿ ತಾಕುಗಳ ಮಧ್ಯೆ ಕನಿಷ್ಠ 600–1000 ಮೀ. ದೂರದ ಅಂತರ ಕೊಟ್ಟು ಒಟ್ಟಿಗೆ ಬೀಜೋತ್ಪಾದನೆ ಕಾರ್ಯ ಕೈಗೊಳ್ಳಲು ಸಾಧ್ಯವಾಗದ ಸಂದರ್ಭಗಳಲ್ಲಿ ಈ ವಿಧಾನವನ್ನು ಪಾಲಿಸಬಹುದು.

ಈ ವಿಧಾನದಲ್ಲಿ ಬೀಜೋತ್ಪಾದನೆ ಕೈಗೊಳ್ಳಲಿರುವ ತಳಿಗಳು ಮತ್ತು ಅನ್ಯ ತಳಿಗಳ ಹೂ ಅರಳಲು ತೆಗೆದುಕೊಳ್ಳುವ ಕಾಲದ ವ್ಯತ್ಯಾಸದ ದಿವಸಗಳನ್ನು ಗಮನದಲ್ಲಿಟ್ಟುಕೊಂಡು ಈ ತಳಿಗಳು ಒಂದೇ ಸಮಯದಲ್ಲಿ ಹೂವಾಗದಂತೆ ನೋಡಿಕೊಳ್ಳಲು ಸುಮಾರು 25–30 ದಿವಸಗಳ ಅಂತರದಲ್ಲಿ ಈ ತಳಿಗಳನ್ನು ಒಂದರ ನಂತರ ಮತ್ತೊಂದನ್ನು ಬಿತ್ತುವುದರಿಂದ ಬೀಜೋತ್ಪಾದನೆಯ ತಳಿಗಳ ಪರಿಶುದ್ಧತೆಯನ್ನು ಕಾಪಾಡಿಕೊಳ್ಳಬಹುದು.


**ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:**
**ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು**
ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನಾ ಪ್ರಾಯೋಜನೆ,
ಕೃಷಿ ವಿಶ್ವ ವಿದ್ಯಾನಿಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560065
ದೂರವಾಣಿ: 080 23330153–331


# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

# ಉತ್ತಮ ಇಳುವರಿಗಾಗಿ ನೂತನ ಸೂರ್ಯಕಾಂತಿ ಸಂಕರಣ ತಳಿಗಳು

















ಡಾ. ಎಸ್. ಡಿ. ನೆಹರು, ಡಾ. ಟಿ. ಕೆ. ನಾಗರತ್ನ, ಡಾ. ಕೆ. ಎಸ್. ಸೋಮಶೇಖರ್,
ಡಾ. ಆರ್. ಮಂಜುನಾಥ, ಡಾ. ಬಿ.ಎಸ್. ಚೇತನ, ಡಾ. ಅರ್ಜುಮನ್ ಬಾನು
ಮತ್ತು ಶ್ರೀ. ದತ್ತಾತ್ರೇಯ ಭಟ್

ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನಾ ಪ್ರಾಯೋಜನೆ
ವಲಯ ಕೃಷಿ ಸಂಶೋಧನಾ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ,
ಜಿಕೆವಿಕೆ, ಬೆಂಗಳೂರು 560065

# ಉತ್ತಮ ಇಳುವರಿಗಾಗಿ ನೂತನ ಸೂರ್ಯಕಾಂತಿ ಸಂಕರಣ ತಳಿಗಳು

ಸೂರ್ಯಕಾಂತಿ ಬೆಳೆಯು ಕರ್ನಾಟಕ ರಾಜ್ಯ ಹಾಗೂ ದೇಶದ ಪ್ರಮುಖ ಎಣ್ಣೆಕಾಳು ಬೆಳೆಯಾಗಿದ್ದು, ಸುಮಾರು 50 ವರ್ಷಗಳಿಂದಲೂ ಸಾಗುವಳಿ ಮಾಡುತ್ತಿದ್ದು, ಕರ್ನಾಟಕದಲ್ಲಿ ಈ ಬೆಳೆಯ ಬೇಸಾಯ ಇತರೆ ಎಣ್ಣೆಕಾಳು ಬೆಳೆಗಳಿಗೆ ಹೋಲಿಸಿದರೆ ಇತ್ತೀಚಿನದು. ಆದರೂ, ಕಡಿಮೆ ಅವಧಿಯಲ್ಲಿಯೇ ಇದು ನಮ್ಮ ರೈತರನ್ನು ಆಕರ್ಷಿಸಿರುತ್ತದೆ.

ಭಾರತ ದೇಶದ ಒಟ್ಟು ಸೂರ್ಯಕಾಂತಿ ಬೆಳೆಯ ವಿಸ್ತೀರ್ಣದಲ್ಲಿ ಸುಮಾರು ಅರ್ಧಕ್ಕಿಂತಲೂ ಹೆಚ್ಚಿನ ವಿಸ್ತೀರ್ಣ ಹಾಗೂ ಉತ್ಪಾದನೆ ಕರ್ನಾಟಕ ರಾಜ್ಯದ್ದೇ ಆಗಿರುವುದರಿಂದ ನಮ್ಮ ರಾಜ್ಯಕ್ಕೆ "ಸೂರ್ಯಕಾಂತಿ ರಾಜ್ಯ" ವೆಂಬ ಹೆಗ್ಗಳಿಕೆಯೂ ಇದೆ. ಈ ಬೆಳೆಯನ್ನು ನಮ್ಮ ದೇಶದಲ್ಲಿ ಮುಖ್ಯವಾಗಿ ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ ತಮಿಳುನಾಡು, ಪಂಜಾಬ್, ಹರಿಯಾಣ, ಉತ್ತರ ಪ್ರದೇಶ, ಬಿಹಾರ ಮತ್ತು ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿಯೂ ಸಹ ಒಂದು ಪ್ರಮುಖ ಎಣ್ಣೆಕಾಳು ಬೆಳೆಯಾಗಿ ಬೆಳೆಯಲಾಗುತ್ತಿದೆ. ಸೂರ್ಯಕಾಂತಿ ಬೆಳೆಯು ಖುಷ್ಕಿ ಮತ್ತು ನೀರಾವರಿ ಆಶ್ರಯದಲ್ಲಿ ಒಂದು ಲಾಭದಾಯಕ ಬೆಳೆಯಾಗಿದೆ. ಈ ಬೆಳೆಯನ್ನು ನಮ್ಮ ರಾಜ್ಯದ 25 ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದ್ದು, ವಿಜಯಪುರ, ಬಾಗಲಕೋಟೆ, ರಾಯಚೂರು, ಬಳ್ಳಾರಿ, ಗುಲ್ಬರ್ಗ, ಕೊಪ್ಪಳ, ಚಿತ್ರದುರ್ಗ, ದಾವಣಗೆರೆ, ತುಮಕೂರು, ಹಾಸನ, ಮತ್ತು ಕೋಲಾರ ಸೂರ್ಯಕಾಂತಿ ಬೆಳೆಯುವ ಪ್ರಮುಖ ಜಿಲ್ಲೆಗಳಾಗಿವೆ.

ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಸೂರ್ಯಕಾಂತಿ ಸಂಕರಣ ತಳಿಗಳ ಅಭಿವೃದ್ಧಿ ಕಾರ್ಯವನ್ನು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ಕೈಗೊಂಡು, 1980ರಲ್ಲಿ ಭಾರತದ ಮೊಟ್ಟ ಮೊದಲ ಸೂರ್ಯಕಾಂತಿ ಸಂಕರಣ ತಳಿ ಬಿ.ಎಸ್.ಹೆಚ್–1 ನ್ನು ರಾಷ್ಟ್ರಮಟ್ಟದಲ್ಲಿ ಬಿಡುಗಡೆ ಮಾಡಿದ್ದು ಒಂದು ಪ್ರಮುಖ ಮೈಲಿಗಲ್ಲಾಗಿ ದೇಶದಲ್ಲಿನ ಇತರೆ ಸರ್ಕಾರಿ ಹಾಗೂ ಸರ್ಕಾರೇತರ ಸಂಶೋಧನಾ ಸಂಸ್ಥೆಗಳಲ್ಲಿಯೂ ಸಹ ಸಂಕರಣ ತಳಿಗಳ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಸಂಕರಣ ಯುಗಕ್ಕೆ ನಾಂದಿಯಾಯಿತು. ಸತತ ಸಂಶೋಧನೆ ಹಾಗೂ ತಳಿ ಅಭಿವೃದ್ಧಿ ಕಾರ್ಯಗಳಿಂದಾಗಿ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ಕೇಂದ್ರದಿಂದ ಕೆ.ಬಿ.ಎಸ್.ಹೆಚ್–41, ಕೆ.ಬಿ.ಎಸ್.ಹೆಚ್–42, ಕೆ.ಬಿ.ಎಸ್.ಹೆಚ್–53 ಹಾಗೂ ಕೆ.ಬಿ.ಎಸ್.ಹೆಚ್–78 ಸಂಕರಣ ತಳಿಗಳನ್ನು ಅಭಿವೃದ್ಧಿ ಪಡಿಸಿ ರಾಜ್ಯ ಮಟ್ಟದಲ್ಲಿಯೂ ಮತ್ತು ಕೆ.ಬಿ.ಎಸ್.ಹೆಚ್–1, ಕೆ.ಬಿ.ಎಸ್.ಹೆಚ್–44, ಕೆ.ಬಿ.ಎಸ್.ಹೆಚ್–85 ಮತ್ತು ಕೆ.ಬಿ.ಎಸ್.ಹೆಚ್–88 ಸಂಕರಣ ತಳಿಗಳನ್ನು ರಾಷ್ಟ್ರಮಟ್ಟದಲ್ಲಿ ಸಾಗುವಳಿಗಾಗಿ ಬಿಡುಗಡೆ ಮಾಡಲಾಗಿದೆ.

ಕರ್ನಾಟಕ ರಾಜ್ಯದಲ್ಲಿ ಸೂರ್ಯಕಾಂತಿ ಬೆಳೆಯ ಮಹತ್ವವನ್ನು ಮನಗೊಂಡ ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನಾ ಪ್ರಾಯೋಜನೆಯು ಸುಮಾರು 52 ವರ್ಷಗಳಿಂದ ಸತತವಾಗಿ ಸೂರ್ಯಕಾಂತಿ ಬೆಳೆಯಲ್ಲಿ ಅಧಿಕ ಇಳುವರಿಯ ತಳಿಗಳು ಹಾಗೂ ಸಂಕರಣ ತಳಿಗಳನ್ನು ಅಭಿವೃದ್ಧಿ ಪಡಿಸಿ ಅದಕ್ಕೆ ಪೂರಕವಾದ ಬೇಸಾಯ ಹಾಗೂ ಸಸ್ಯ ಸಂರಕ್ಷಣ ಕ್ರಮಗಳನ್ನು ಅಭಿವೃದ್ಧಿ ಪಡಿಸುವಲ್ಲಿ ಯಶಸ್ವಿಯಾಗಿದೆ. ಕರ್ನಾಟಕ ರಾಜ್ಯದ ದಕ್ಷಿಣ ಜಿಲ್ಲೆಗಳಲ್ಲಿ ಪೂರ್ವ ಮುಂಗಾರು ಬೆಳೆಯಾಗಿ ಸೂರ್ಯಕಾಂತಿ ಬೆಳೆಯನ್ನು ಎಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ಬೆಳೆಯುತ್ತಿರುವುದು ವಾಡಿಕೆಯಾಗಿದೆ. ಪೂರ್ವ ಮುಂಗಾರು ಮಳೆಯು ದಕ್ಷಿಣ ಭಾಗದ ಚಾಮರಾಜನಗರ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಪ್ರಮುಖವಾಗಿದ್ದು ಶೇ.30 ರಷ್ಟು ಮಳೆಯು ಬರುತ್ತದೆ. ಈ ಸಮಯದಲ್ಲಿ ಸುಮಾರು 8 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಸೂರ್ಯಕಾಂತಿಯನ್ನು ಬಿತ್ತನೆ ಮಾಡಲಾಗುತ್ತದೆ. ಬಿತ್ತಿದ 30 ರಿಂದ 40 ದಿನಗಳ ನಂತರ ಜೂನ್ ಹಾಗೂ ಜುಲೈ ತಿಂಗಳಿನಲ್ಲಿ ಮುಂಗಾರು ಮಳೆಯ ಅಭಾವ ಉಂಟಾಗುತ್ತದೆ. ಆದ್ದರಿಂದ ಸೂರ್ಯಕಾಂತಿ ಬೆಳೆಯು ಹೂವು ಬಿಡುವ ಹಂತದಲ್ಲಿ ಮಣ್ಣಿನ ತೇವಾಂಶದ ಕೊರತೆಯಿಂದ ಬೆಳವಣಿಗೆ ಹಾಗೂ ಇಳುವರಿಯ ಮೇಲೆ ಪರಿಣಾಮವನ್ನು ಉಂಟುಮಾಡಿ ರೈತರಿಗೆ ಆಧಾಯದ ನಷ್ಟ ಉಂಟಾಗುತ್ತದೆ. ಇದನ್ನು ಮನಗೊಂಡ ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರಿನ ಅಖಿಲ ಭಾರತ ಸುಸಂಘಟಿತ ಸೂರ್ಯಕಾಂತಿ ಸಂಶೋಧನಾ ಪ್ರಾಯೋಜನೆಯು ಕಡಿಮೆ ಮಣ್ಣಿನ ತೇವಾಂಶದಲ್ಲಿ ಹೆಚ್ಚು ಇಳುವರಿ ನೀಡುವ ಅಲ್ಪ ಹಾಗೂ ಮಧ್ಯಮಾವದಿಯ ಸಂಕರಣ ತಳಿಗಳನ್ನು ಅಭಿವೃದ್ಧಿ ಪಡಿಸಿ ರೈತರ ಆರ್ಥಿಕ ಮಟ್ಟವನ್ನು ಸುಧಾರಿಸಲು ಸಹಕಾರಿಯಾಗಿರುತ್ತದೆ. ಆದ್ದರಿಂದ ದಕ್ಷಿಣ ಜಿಲ್ಲೆಗಳಲ್ಲಿ ಸೂರ್ಯಕಾಂತಿ ಬೆಳೆಯ ವಿಸ್ತೀರ್ಣವನ್ನು ಹೆಚ್ಚಿಸಲು ಗಮನಾರ್ಹವಾಗಿ ಶ್ರಮಿಸುತ್ತಿದೆ. ಹೊಸದಾಗಿ ಬಿಡುಗಡೆಗೊಂಡ ಅಲ್ಪಾವದಿ ಹಾಗೂ ಮದ್ಯಮಾವಧಿ ಸೂರ್ಯಕಾಂತಿ ಸಂಕರಣ ತಳಿಗಳ ಮಾಹಿತಿಯು ಕೆಳಕಂಡಂತಿದೆ.

### ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಿಂದ ಬಿಡುಗಡೆಯಾದ ಸೂರ್ಯಕಾಂತಿ ಸಂಕರಣ ತಳಿಗಳು:

| ಕ್ರ.ಸಂ | ಸಂಕರಣ ತಳಿಗಳು | ಬಿಡುಗಡೆಗೊಂಡ ವರ್ಷ | ಅವಧಿ (ದಿನಗಳು) | ಶೇಕಡವಾರು ಎಣ್ಣೆ ಅಂಶ | ಬೀಜದ ಇಳುವರಿ (kg/ha) | ರಾಜ್ಯ/ರಾಷ್ಟ್ರಮಟ್ಟ |
|---|---|---|---|---|---|---|
| 1 | ಕೆ.ಬಿ.ಎಸ್.ಹೆಚ್–1 | 1992 | 90–92 | 42–44 | 1800–2000 | ರಾಷ್ಟ್ರಮಟ್ಟ |
| 2 | ಕೆ.ಬಿ.ಎಸ್.ಹೆಚ್–41 | 2001 | 90–92 | 40–42 | 1900–2300 | ರಾಜ್ಯಮಟ್ಟ |
| 3 | ಕೆ.ಬಿ.ಎಸ್.ಹೆಚ್–42 | 2001 | 90–95 | 39–41 | 1800–2350 | ರಾಜ್ಯಮಟ್ಟ |
| 4 | ಕೆ.ಬಿ.ಎಸ್.ಹೆಚ್–44 | 2002 | 95–100 | 38–40 | 1900–2400 | ರಾಷ್ಟ್ರಮಟ್ಟ |
| 5 | ಕೆ.ಬಿ.ಎಸ್.ಹೆಚ್–53 | 2008 | 95–100 | 42–44 | 1900–2400 | ರಾಜ್ಯಮಟ್ಟ |
| 6 | ಕೆ.ಬಿ.ಎಸ್.ಹೆಚ್–78 | 2018 | 82–85 | 38–40 | 2200 – 2500 | ರಾಜ್ಯಮಟ್ಟ |
| 7 | ಕೆ.ಬಿ.ಎಸ್.ಹೆಚ್–85 | 2022 | 88–90 | 40–41 | 2400 – 2600 | ರಾಷ್ಟ್ರಮಟ್ಟ |
| 8 | ಕೆ.ಬಿ.ಎಸ್.ಹೆಚ್–88 | 2023 | 85–88 | 40–41 | 2000 – 2200 | ರಾಷ್ಟ್ರಮಟ್ಟ |
| 9 | ಕೆ.ಬಿ.ಎಸ್.ಹೆಚ್–90 | 2024 | 80–82 | 39–40 | 2100 – 2400 | ರಾಷ್ಟ್ರಮಟ್ಟ |
| 10 | ಕೆ.ಬಿ.ಎಸ್.ಹೆಚ್–91 | 2025 | 85–90 | 39–40 | 22300 – 2500 | ರಾಷ್ಟ್ರಮಟ್ಟ |

### ಸೂರ್ಯಕಾಂತಿ ಸಂಕರಣ ತಳಿ ಕೆ.ಬಿ.ಎಸ್.ಹೆಚ್–78:

ಈ ಅಲ್ಪಾವಧಿ ಸಂಕರಣ ತಳಿಯು (82–85 ದಿನಗಳು) ಅಧಿಕ ಇಳುವರಿ ಮತ್ತು ಉತ್ತಮ ಎಣ್ಣೆಯ ಅಂಶ ಹೊಂದಿದ್ದು, ಕರ್ನಾಟಕದ ವಲಯ 4, 5, 6 ಮತ್ತು 7 ರಲ್ಲಿ ಮಳೆಯಾಶ್ರಿತ




ಹಾಗೂ ನೀರಾವರಿ ಪ್ರದೇಶಗಳಲ್ಲಿ ಬೆಳೆಯಬಹುದಾಗಿದೆ. ಈ ಸಂಕರಣ ತಳಿಯು ನೀರಾವರಿಯಲ್ಲಿ 22–25 ಕ್ವಿ/ಹೆ ಹಾಗೂ ಮಳೆಯಾಶ್ರಿತದಲ್ಲಿ 11–12 ಕ್ವಿ/ಹೆ ಬೀಜದ ಇಳುವರಿಯನ್ನು ನೀಡುತ್ತದೆ. ಈ ಸಂಕರಣ ತಳಿಯ ಬೀಜಗಳು 38–40 % ಎಣ್ಣೆಯ ಅಂಶವನ್ನು ಹೊಂದಿದ್ದು, 900 ಕೆ.ಜಿ/ಹೆ ಎಣ್ಣೆಯ ಇಳುವರಿವನ್ನು ನೀಡುತ್ತದೆ. ಕೆ.ಬಿ.ಎಸ್.ಹೆಚ್–78ರ ಗುಣಲಕ್ಷಣಗಳೆಂದರೆ ಮಧ್ಯಮ ಸಸ್ಯದ ಎತ್ತರ, ಗಟ್ಟಿಮುಟ್ಟಾದ ಕಾಂಡವಿದ್ದು, ಇದರ ಬೀಜೋತ್ಪಾದನೆಯನ್ನು ಹಿಂಗಾರು ಹಂಗಾಮಿನಲ್ಲಿ ಕೈಗೊಳ್ಳುವುದು ಸೂಕ್ತವಾಗಿದೆ.

### ಸೂರ್ಯಕಾಂತಿ ಸಂಕರಣ ತಳಿ ಕೆ.ಬಿ.ಎಸ್.ಹೆಚ್–85:

ಈ ಸಂಕರಣ ತಳಿಯ ಅವಧಿ 85-90 ದಿನಗಳಾಗಿದ್ದು, ಅಧಿಕ ಇಳುವರಿ ಮತ್ತು ಉತ್ತಮ ಎಣ್ಣೆಯ ಅಂಶ (40%) ಹೊಂದಿರುತ್ತದೆ. ಈ ಸಂಕರಣ ತಳಿಯು ನೀರಾವರಿಯಲ್ಲಿ 24 – 26 ಕ್ವಿ/ಹೆ ಹಾಗೂ ಮಳೆಯಾಶ್ರಿತದಲ್ಲಿ 15 – 19 ಕ್ವಿ/ಹೆ ಬೀಜದ ಇಳುವರಿಯನ್ನು ನೀಡುತ್ತದೆ.




ಕೆ.ಬಿ.ಎಸ್.ಹೆಚ್ – 85 ಸಂಕರಣ ತಳಿಯ ಬೀಜಗಳು 40 – 41 % ಎಣ್ಣೆಯ ಅಂಶವನ್ನು ಹೊಂದಿದ್ದು, 988 ಕೆ.ಜಿ/ಹೆ ಎಣ್ಣೆಯ ಇಳುವರಿಯನ್ನು ನೀಡುತ್ತದೆ. ಈ ಸಂಕರಣ ತಳಿಯು ಅಧಿಕ ತೆನೆಯ ವ್ಯಾಸ ಮತ್ತು ಕೇದಿಗೆ ರೋಗ ನಿರೋಧಕ ಶಕ್ತಿ ಹೊಂದಿರುತ್ತದೆ. ಈ ಸಂಕರಣ ತಳಿಯನ್ನು ಕರ್ನಾಟಕದ ವಲಯ 4, 5, 6 ಮತ್ತು 7 ರಲ್ಲಿ ಮಳೆಯಾಶ್ರಿತ ಹಾಗೂ ನೀರಾವರಿ ಪ್ರದೇಶದಲ್ಲಿ ಬೆಳೆಯಬಹುದಾಗಿದೆ, ಮಳೆಯಾಶ್ರಿತದಲ್ಲಿ ಭಾರತದ ವಲಯ 4 (ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ) ಮತ್ತು ವಲಯ 5 (ಆಂದ್ರ ಪ್ರದೇಶ, ದಕ್ಷಿಣ ಕರ್ನಾಟಕ, ತೆಲಾಂಗಾಣ ಮತ್ತು ತಮಿಳುನಾಡು) ರಲ್ಲಿ ಬೆಳೆಯಬಹುದಾಗಿದೆ. ಕೆ.ಬಿ.ಎಸ್.ಹೆಚ್–85ರ ಗುಣಲಕ್ಷಣಗಳೆಂದರೆ ಮಧ್ಯಮ ಸಸ್ಯದ ಎತ್ತರ , ಗಟ್ಟಿಮುಟ್ಟಾದ ಕಾಂಡವಿದ್ದು, ಇದರ ಬೀಜೋತ್ಪಾದನೆಯನ್ನು ಹಿಂಗಾರು ಹಂಗಾಮಿನಲ್ಲಿ ಕೈಗೊಳ್ಳುವುದು ಸೂಕ್ತವಾಗಿದೆ.

### ಸೂರ್ಯಕಾಂತಿ ಸಂಕರಣ ತಳಿ ಕೆ.ಬಿ.ಎಸ್.ಹೆಚ್–88:

ಈ ಸಂಕರಣ ತಳಿಯ ಅವಧಿ 86-89 ದಿನಗಳಾಗಿದ್ದು, ಅಧಿಕ ಇಳುವರಿ ಮತ್ತು ಉತ್ತಮ ಎಣ್ಣೆಯ ಅಂಶ (40-41%) ಹೊಂದಿರುತ್ತದೆ. ಈ ಸಂಕರಣ ತಳಿಯು ನೀರಾವರಿಯಲ್ಲಿ 20 – 22 ಕ್ವಿ/ಹೆ ಹಾಗೂ ಮಳೆಯಾಶ್ರಿತದಲ್ಲಿ 10– 12 ಕ್ವಿ/ಹೆ ಬೀಜದ ಇಳುವರಿಯನ್ನು ನೀಡುತ್ತದೆ. ಈ ಸಂಕರಣ ತಳಿಯು ಅಧಿಕ ತೆನೆಯ ವ್ಯಾಸ ಮತ್ತು ಕೇದಿಗೆ ರೋಗ ನಿರೋಧಕ ಶಕ್ತಿ ಹೊಂದಿರುತ್ತದೆ. ಈ ಸಂಕರಣ ತಳಿಯನ್ನು ಕರ್ನಾಟಕದ ವಲಯ 4, 5, 6 ಮತ್ತು 7 ರಲ್ಲಿ ಮಳೆಯಾಶ್ರಿತ ಹಾಗೂ ನೀರಾವರಿ ಪ್ರದೇಶಗಳಲ್ಲಿ ಬೆಳೆಯಬಹುದಾಗಿದೆ, ಮಳೆಯಾಶ್ರಿತದಲ್ಲಿ ಭಾರತದ ವಲಯ 1 (ಉತ್ತರಖಂಡ, ಜಮ್ಮು ಕಾಶ್ಮೀರ), 4 (ಗುಜರಾತ್, ಮಹಾರಾಷ್ಟ್ರ ಮತ್ತು ಉತ್ತರ ಕರ್ನಾಟಕ) ಮತ್ತು ವಲಯ 5 (ಆಂದ್ರ ಪ್ರದೇಶ, ದಕ್ಷಿಣ ಕರ್ನಾಟಕ, ತೆಲಾಂಗಣ ಮತ್ತು ತಮಿಳುನಾಡು) ರಲ್ಲಿ ಬೆಳೆಯಬಹುದಾಗಿದೆ.

